# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ , ಬಿ. ಹೆಚ್. ರಸ್ತೆ , ತುಮಕೂರು - 572 103

ಸಂಖ್ಯೆ:ತು.ವಿ:ಅ.ವಿ:2026-27/ 2118

ದಿನಾಂಕ:02.09.2026

## : ಸುತ್ತೋಲೆ :

ವಿಷಯ : ದಿನಾಂಕ:05.09.2026 ರಂದು ಆಚರಿಸಲಿರುವ "ಶಿಕ್ಷಕರ ದಿನಾಚರಣೆ" ಮತ್ತು "ಭಾರತರತ್ನ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ರವರ ಜಯಂತಿ" ಕಾರ್ಯಕ್ರಮದಲ್ಲಿ ಭಾಗವಹಿಸುವ ಕುರಿತು.

ಉಲ್ಲೇಖ : ಮಾನ್ಯ ಕುಲಪತಿಗಳ ಅನುಮೋದನೆಯ ದಿನಾಂಕ:02.09.2026 (ಕಂಡಿಕೆ-107)

* * * * * *

ತುಮಕೂರು ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:**05.09.2026** ರ ಶನಿವಾರದಂದು ಬೆಳಿಗ್ಗೆ **11.00** ಗಂಟೆಗೆ "ಶಿಕ್ಷಕರ ದಿನಾಚರಣೆ" ಮತ್ತು "ಭಾರತರತ್ನ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ರವರ ಜಯಂತಿ" ಕಾರ್ಯಕ್ರಮವನ್ನು ಸರ್. ಎಂ. ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರೊ. ಹೆಚ್. ನಾಗಭೂಷಣ, ಮಾನ್ಯ ಕುಲಪತಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರು ವಹಿಸಲಿದ್ದು, ಡಾ. ರಘು ವಿ., ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ವಿ. ಆರ್. ಅಕಾಡೆಮಿ ಹಾಗೂ ಮಾಜಿ ಉಪನಿರ್ದೇಶಕರು, ಭಾರತೀಯ ವಿದ್ಯಾಭವನ, ಬೆಂಗಳೂರು ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಶ್ರೀಮತಿ ನಾಹಿದಾ ಜ಼ಮ್ ಜ಼ಮ್ (ಕೆ.ಎ.ಎಸ್), ಮಾನ್ಯ ಕುಲಸಚಿವರು, ಪ್ರೊ. ಮೋಹನ ಹೆಚ್.ಎಸ್., ಮಾನ್ಯ ಕುಲಸಚಿವರು(ಪರೀಕ್ಷಾಂಗ), ಪ್ರೊ. ಪರಶುರಾಮ ಕೆ.ಜಿ., ನಿರ್ದೇಶಕರು, ಐಕ್ಯೂಎಸಿ ಹಾಗೂ ಶ್ರೀ ನರಸಿಂಹಮೂರ್ತಿ, ಮಾನ್ಯ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರುಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ.

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಮತ್ತು ಘಟಕ ಕಾಲೇಜುಗಳ ಎಲ್ಲಾ ಖಾಯಂ/ಅತಿಥಿ ಉಪನ್ಯಾಸಕರುಗಳು ಕಡ್ಡಾಯವಾಗಿ ದಿನಾಂಕ:05.09.2026 ರಂದು ಬೆಳಿಗ್ಗೆ 10.45 ಕ್ಕೆ ಸರ್.ಎಂ. ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಹಾಜರಿದ್ದು, ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ತಿಳಿಸಲಾಗಿದೆ.

ಸದರಿ ಮಾಹಿತಿಯನ್ನು ತಮ್ಮ ಕಾಲೇಜು/ವಿಭಾಗದಲ್ಲಿನ ಎಲ್ಲಾ ಖಾಯಂ/ಅತಿಥಿ ಉಪನ್ಯಾಸಕರುಗಳ ಗಮನಕ್ಕೆ ತರುವುದು.

ಆದೇಶದ ಮೇರೆಗೆ

02.09.2026

ಉಪಕುಲಸಚಿವರು

ಉಪಕುಲಸಚಿವರು

ಅಭಿವೃದ್ಧಿ ವಿಭಾಗ

ತುಮಕೂರು ವಿಶ್ವವಿದ್ಯಾನಿಲಯ

ಗೆ,

1. ಅಧ್ಯಕ್ಷರು/ಸಂಯೋಜಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಂಯೋಜಕರು, ಜ್ಞಾನಸಿರಿ ಕ್ಯಾಂಪಸ್, ತುಮಕೂರು ವಿಶ್ವವಿದ್ಯಾನಿಲಯ, ಬಿದರಕಟ್ಟೆ.
3. ಅಧ್ಯಕ್ಷರು/ಸಂಯೋಜಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು, ಜ್ಞಾನಸಿರಿ ಕ್ಯಾಂಪಸ್, ತುಮಕೂರು ವಿಶ್ವವಿದ್ಯಾನಿಲಯ, ಬಿದರಕಟ್ಟೆ.
4. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಸಂಯೋಜಕರು, ಶಿರಾ ಸ್ನಾತಕೋತ್ತರ ಕೇಂದ್ರ, ಭುವನಹಳ್ಳಿ, ಶಿರಾ.
6. ಸಂಯೋಜಕರು, ತಿಪಟೂರು ಸ್ನಾತಕೋತ್ತರ ಕೇಂದ್ರ, ತಿಪಟೂರು.

ಪ್ರತಿಗಳು :

1. ಮಾನ್ಯ ಕುಲಸಚಿವರು(ಮೌಲ್ಯಮಾಪನ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕಾರ್ಯಪಾಲಕ ಅಭಿಯಂತರರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಸಂಯೋಜಕರು, ರಾಷ್ಟ್ರೀಯ ಹಬ್ಬಗಳ ಆಚರಣೆ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು : **ಕಾರ್ಯಕ್ರಮ ಆಯೋಜನೆಗೆ ಅಗತ್ಯ ಕ್ರಮವಹಿಸುವುದು.**
5. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು :- **ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಭಿತ್ತರಿಸುವಂತೆ ಹಾಗೂ ಎಲ್ಲಾ ಬೋಧಕ ಸಿಬ್ಬಂದಿಗಳಿಗೆ ಸಂದೇಶವನ್ನು ಕಳುಹಿಸುವಂತೆ ಸೂಚಿಸಿದೆ.**
6. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
7. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
8. ಕಚೇರಿ ಪ್ರತಿ.